L&T Finance

# ಎಲ್&ಟಿ ಫೈನಾನ್ಸ್ ಲಿಮಿಟೆಡ್

## ನ್ಯಾಯೋಚಿತ ಅಭ್ಯಾಸ ಸಂಹಿತೆ

## 2020

ಆವೃತ್ತಿ ನಿಯಂತ್ರಣ

| ಆವೃತ್ತಿ | ಅಳವಡಿಕೆಯ ದಿನಾಂಕ | ಬದಲಾವಣೆಯ ಶಿಫಾರಸು | ಮಾಲೀಕರು | ಅನುಮೋದಿತ ಪ್ರಾಧಿಕಾರ |
|---|---|---|---|---|
| 1.0 | ಅಕ್ಟೋಬರ್, 2017 | ಎಫ್ ಪಿ ಸಿ ಅವಲೋಕಿಸಿ ಆರ್ ಬಿ ಐ ನ ಪ್ರಮುಖ ನಿರ್ದೇಶನಗಳಿಗೆ ಅನುಗುಣವಾಗಿ | ನಿಬಂಧನಾ ಅನುಸರಣೆ | ನಿರ್ದೇಶಕರ ಸಮಿತಿ |
| 1.1 | ಅಕ್ಟೋಬರ್, 2018 | ಎಫ್ ಪಿ ಸಿ ಅವಲೋಕಿಸಿ ಆರ್ ಬಿ ಐ ನ ಪ್ರಮುಖ ನಿರ್ದೇಶನಗಳಿಗೆ | ನಿಬಂಧನಾ ಅನುಸರಣೆ | ನಿರ್ದೇಶಕರ ಸಮಿತಿ |
| 1.2 | ಅಕ್ಟೋಬರ್, 2019 | ಎಫ್ ಪಿ ಸಿ ಅವಲೋಕಿಸಿ ಆರ್ ಬಿ ಐ ನ ಪ್ರಮುಖ ನಿರ್ದೇಶನಗಳಿಗೆ | ನಿಬಂಧನಾ ಅನುಸರಣೆ | ನಿರ್ದೇಶಕರ ಸಮಿತಿ |

*ಪ್ರಮುಖ ಸೂಚನೆ:*

*ಯಾವುದೇ ಸಮಯದಲ್ಲಿ ನಿಯಮ ಮತ್ತು ಯಾವುದೇ ನಿಬಂಧನೆಗಳು, ಷರತ್ತುಗಳು, ಮಾರ್ಗಸೂಚಿಗಳು, ಅಧಿಸೂಚನೆ, ಸ್ಪಷ್ಟೀಕರಣಗಳು, ಸುತ್ತೋಲೆಗಳು, ರಿಸರ್ವ್ ಬ್ಯಾಂಕ್ ಹೊರಡಿಸಿದ ಮಾಸ್ಟರ್ ಸುತ್ತೋಲೆಗಳು / ನಿರ್ದೇಶನಗಳ ನಡುವಿನ ವ್ಯಾಖ್ಯಾನ / ಮಾಹಿತಿಗೆ ಸಂಬಂಧಿಸಿದ ಸಂಘರ್ಷವಿದ್ದರೆ ಅಂತಹ ನಿಯಮಗಳು, ನಿಬಂಧನೆಗಳು, ಮಾರ್ಗಸೂಚಿಗಳು, ಅಧಿಸೂಚನೆ, ಸ್ಪಷ್ಟೀಕರಣಗಳ ವಿವರಣೆ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಹೊರಡಿಸಿದ ಸುತ್ತೋಲೆಗಳು, ಪ್ರಮುಖ ನಿರ್ದೇಶನಗಳು ಅಸ್ತಿತ್ವದಲ್ಲಿರುತ್ತವೆ.*

L&T Finance

ವಿಷಯಗಳ ಕೋಷ್ಟಕ


| ಕ್ರ.ಸಂ. | ವಿವರಗಳು | ಪುಟಗಳು |
|---|---|---|
| | | |
| 1 | ಪರಿಚಯ | |
| 2 | ಸಾಲಕ್ಕೆ ಅರ್ಜಿ ಮತ್ತು ಅದರ ಪ್ರಕ್ರಿಯೆಗಳು | 3 |
| 3 | ಸಾಲ ಪರಿಶೀಲನೆ ಮತ್ತು ನಿಯಮ/ಷರತ್ತುಗಳು | 3 |
| 4 | ನಿಯಮ ಮತ್ತು ಷರತ್ತುಗಳಲ್ಲಿ ಬದಲಾವಣೆಗಳು ಸೇರಿದಂತೆ ಸಾಲ ವಿತರಣೆ | 4 |
| 5 | ಸಾಮಾನ್ಯ | 4 |
| 6 | ದೂರು ಪರಿಹಾರ ಅಧಿಕಾರಿ | 5 |
| 7 | ವಾಹನಗಳ ಮರುವಸೂಲಾತಿ | 6 |

L&T Finance

ಪರಿಚಯ:

ಪ್ರಮುಖ ನಿರ್ದೇಶನ - ಬ್ಯಾಂಕಿಂಗೇತರ ಹಣಕಾಸು ಕಂಪನಿ - ವ್ಯವಸ್ಥಿತವಾಗಿ ಪ್ರಮುಖವಾದ ಠೇವಣಿ ರಹಿತ ಕಂಪನಿ ಮತ್ತು ಠೇವಣಿ ತೆಗೆದುಕೊಳ್ಳುವ ಕಂಪನಿ (ರಿಸರ್ವ್ ಬ್ಯಾಂಕ್) ನಿರ್ದೇಶನಗಳು, 2016 ರ ನ್ಯಾಯಯುತ ಅಭ್ಯಾಸಗಳ ಬಗ್ಗೆ ವಿಶಾಲವಾದ ಮಾರ್ಗಸೂಚಿಗಳನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ ಸೂಚಿಸಿವೆ, ಇದನ್ನು ಎಲ್ಲಾ ಬ್ಯಾಂಕೇತರ ಹಣಕಾಸು ಕಂಪನಿಗಳ ನಿರ್ದೇಶಕರ ಮಂಡಳಿಯು ರೂಪಿಸಿ ಅನುಮೋದಿಸಬೇಕು.

ನ್ಯಾಯೋಚಿತ ಅಭ್ಯಾಸ ಸಂಹಿತೆ ಗ್ರಾಹಕರಿಗೆ ಅಭ್ಯಾಸಗಳ ಕುರಿತಾದ ಪರಿಣಾಮಕಾರಿ ಅವಲೋಕನ ನೀಡುವ ಗುರಿಯನ್ನು ಹೊಂದಿದ್ದು, ಕಂಪನಿ ತನ್ನ ಗ್ರಾಹಕರಿಗೆ ನೀಡುವ ಹಣಕಾಸು ಸೌಲಭ್ಯಗಳು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಅದನ್ನು ಅನುಸರಿಸುತ್ತದೆ. ಗ್ರಾಹಕರು ಪಡೆದುಕೊಳ್ಳಬೇಕಾದ ಹಣಕಾಸಿನ ಸೌಲಭ್ಯಗಳು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ವಿವೇಚನಾಯುಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಈ ಸಂಹಿತೆ ನೆರವಾಗಲಿದೆ ಮತ್ತು ಇದು ಕಂಪನಿ ಮಂಜೂರು ಮಾಡುವ ಮತ್ತು ವಿತರಿಸುವ ಯಾವುದೇ ಸಾಲಕ್ಕೆ ಅನ್ವಯಿಸುತ್ತದೆ.

**ನ್ಯಾಯೋಚಿತ ಅಭ್ಯಾಸ ಸಂಹಿತೆ:**

ಕಂಪನಿಯ ಉದ್ದಿಮೆಯನ್ನು ಪರಿಣಾಮದಾಯಕತೆ, ಗ್ರಾಹಕ-ಕೇಂದ್ರಿತ ಮತ್ತು ಕಾರ್ಪೊರೇಟ್ ನಿರ್ವಹಣಾ ತತ್ವಗಳ ಮೇಲೆ ಕೇಂದ್ರೀಕರಿಸಿ ಅಸ್ತಿತ್ವದಲ್ಲಿರುವ ಕಾನೂನು ಮತ್ತು ನಿಬಂಧನಾ ಅಗತ್ಯಗಳಿಗೆ ಅನುಗುಣವಾಗಿ ನಡೆಸಲಾಗುತ್ತದೆ.

ಇದರೊಂದಿಗೆ, ಕಂಪನಿ ತನ್ನ ಕಾರ್ಯವಿಧಾನದಲ್ಲಿ ನ್ಯಾಯೋಚಿತ ಅಭ್ಯಾಸ ಸಂಹಿತೆಗೆ ಬದ್ಧವಾಗಿದ್ದು, ಇದರ ಪ್ರಮುಖ ಅಂಶಗಳು ಕೆಳಗಿನಂತಿದೆ:

1. ಸಾಲಕ್ಕೆ ಅರ್ಜಿ ಮತ್ತು ಅದರ ಪ್ರಕ್ರಿಯೆಗಳು:

- ಅನ್ವಯವಾಗುವಲ್ಲಿ ಕಂಪನಿ ಉತ್ಪನ್ನಗಳಿಗಾಗಿ ಸಾಲ ಅರ್ಜಿ ನಮೂನೆಯನ್ನು ರೂಪಿಸುತ್ತದೆ. ಸಾಲ ಅರ್ಜಿ ನಮೂನೆ ಅರ್ಜಿ ನಮೂನೆಯೊಂದಿಗೆ ಸಲ್ಲಿಸಲು ಅಗತ್ಯವಾದ ದಾಖಲಾತಿಗಳಿಗೆ ಸಂಬಂಧಿಸಿದ ಅಗತ್ಯ ಮಾಹಿತಿಗಳನ್ನು ಒಳಗೊಂಡಿರುತ್ತದೆ.

- ಕಂಪನಿ ಎಲ್ಲಾ ಸಾಲ ಅರ್ಜಿಗಳ ರಸೀದಿಗೆ ಸ್ವೀಕೃತಿ ನೀಡಲು ವ್ಯವಸ್ಥೆ ರೂಪಿಸಿರುತ್ತದೆ.

2. ಸಾಲ ಪರಿಶೀಲನೆ ಮತ್ತು ನಿಯಮ/ಷರತ್ತುಗಳು:

- ಕಂಪನಿ ಸಾಲಗಾರನ ಸಾಲ ಅರ್ಹತೆಯ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸುತ್ತದೆ, ಇದು ಅರ್ಜಿಯ ಕುರಿತು ನಿರ್ಧಾರ ತೆಗೆದುಕೊಳ್ಳಲು ಪ್ರಮುಖ ಮಾನದಂಡವಾಗಿದೆ. ಮಾನದಂಡ ಕಂಪನಿಯ ಸಾಲ ನಿಯಮ, ವಿಧಾನಗಳು ಮತ್ತು ಅದಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳೊಂದಿಗೆ ಅನುಸರಣೆ ಹೊಂದಿರುತ್ತದೆ.

- ಕಂಪನಿ ಅನುಮೋದಿತ ಪತ್ರದ ಮೂಲಕ ಸಾಲಗಾರನಿಗೆ ಲಿಖಿತ ರೂಪದಲ್ಲಿ ಮನವರಿಕೆ ಮಾಡುತ್ತದೆ, ಇಲ್ಲದಿದ್ದರೆ, ನಿಯಮ ಮತ್ತು ನಿಬಂಧನೆಗಳೊಂದಿಗೆ, ವಾರ್ಷಿಕ ಬಡ್ಡಿದರ ಮತ್ತು ಅರ್ಜಿಯ ವಿಧಾನಗಳೂ ಸೇರಿದಂತೆ, ಮಂಜೂರಾದ ಸಾಲದ ಮೊತ್ತದ ಬಗ್ಗೆ ತಿಳಿಸುತ್ತದೆ. ಕಂಪನಿಯ ಫೈಲ್ ಗಳಲ್ಲಿ ಈ ನಿಯಮ ಮತ್ತು ನಿಬಂಧನೆಗಳಿಗೆ ಸಾಲಗಾರನಿಂದ ಒಪ್ಪಿಗೆ ಪಡೆಯಲಾಗುತ್ತದೆ.

- ಕಂಪನಿ ಸಾಲ ಒಪ್ಪಂದದಲ್ಲಿ ತಡ ಮರುಪಾವತಿಗೆ ವಿಧಿಸಲಾಗುವ ದಂಡ ಬಡ್ಡಿಯನ್ನು ದಪ್ಪ ಅಕ್ಷರದಲ್ಲಿ ಸೂಚಿಸಿರಬೇಕು.

- ಕಂಪನಿ ಸಾಲ ವಿತರಣೆಯ ಸಮಯದಲ್ಲಿ/ವಿತರಣೆಯ ನಂತರದಲ್ಲಿ ಸಾಲ ಒಪ್ಪಂದದಲ್ಲಿ ಉಲ್ಲೇಖಿಸಲಾದ ಎಲ್ಲಾ ಲಗತ್ತುಗಳ ಒಂದು ಒಪ್ಪಂದದ ಪ್ರತಿಯನ್ನು ಸಾಲಗಾರನಿಗೆ ನೀಡಬೇಕು.

- ಕಂಪನಿ ಸಾಲ ಅರ್ಜಿಯ ರಸೀದಿಗೆ ಸ್ವೀಕೃತಿ ನೀಡಬೇಕು. ಇದು ವಿತರಿಸಬೇಕಾದ ಇಂತಹ ಸಾಲ ಅರ್ಜಿಯ ಸಮಯದ ಮಿತಿ ಹೊಂದಿದ್ದು ಸ್ವಿಕೃತಿಯಲ್ಲಿ ಅದನ್ನು ಸೂಚಿಸಿರಬೇಕು

3. ನಿಯಮ ಮತ್ತು ಷರತ್ತುಗಳಲ್ಲಿ ಬದಲಾವಣೆಗಳೂ ಸೇರಿದಂತೆ ಸಾಲ ವಿತರಣೆ:

- ಕಂಪನಿ ನಿಗದಿತ ವಿತರಣೆ, ಬಡ್ಡಿದರ, ಸೇವಾ ಶುಲ್ಕಗಳು, ಪೂರ್ವಪಾವತಿ ಶುಲ್ಕಗಳು ಇತ್ಯಾದಿಗಳೂ ಸೇರಿದಂತೆ ನಿಯಮ ಮತ್ತು ಷರತ್ತುಗಳಲ್ಲಿ ಯಾವುದೇ ಬದಲಾವಣೆಯಿದ್ದರೆ, ಈ ಬಗ್ಗೆ ಇಂಗ್ಲೀಷ್ ಭಾಷೆಯಲ್ಲಿ ಅಥವಾ ಸಾಲಗಾರನಿಗೆ ಅರ್ಥವಾಗುವ ಭಾಷೆಯಲ್ಲಿ ಎಲ್ಲಾ ಸಾಲಗಾರರಿಗೆ ಸೂಚನೆ ನೀಡಬೇಕು. ಕಂಪನಿ ಬಡ್ಡಿದರ ಮತ್ತು ಶುಲ್ಕಗಳಲ್ಲಿನ ಬದಲಾವಣೆ ಕೇವಲ ಪ್ರಾಸ್ತಾವಿಕವಾಗಿ ಜಾರಿಯಲ್ಲಿರುವುದನ್ನೂ ಖಚಿತಪಡಿಸಬೇಕು.

- ಒಪ್ಪಂದದ ಅಡಿಯಲ್ಲಿರುವ ಪಾವತಿ ಅಥವಾ ಸಾಧನೆಯನ್ನು ಮರುಪಡೆಯುವ/ಪ್ರೋತ್ಸಾಹಿಸುವ ನಿರ್ಧಾರ ಸಾಲ ಒಪ್ಪಂದದ ಅನುಸರಣೆಯಲ್ಲಿರಬೇಕು.

- ಕಂಪನಿ ತನ್ನ ಪೂರ್ಣ ಬಾಕಿಗಳನ್ನು ಮರುಪಾವತಿಸುವಾಗ ಅಥವಾ ಕಂಪನಿ ತನ್ನ ಸಾಲಗಾರರ ವಿರುದ್ಧ ಹೊಂದಿರಬಹುದಾದ ಯಾವುದೇ ಹಕ್ಕುಗಳಿಗಾಗಿ ಯಾವುದೇ ಕಾನೂನುಬದ್ಧ ಹಕ್ಕು ಅಥವಾ ಹಕ್ಕುದಾರರಿಗೆ ಒಳಪಟ್ಟಿರುವ ಬಾಕಿ ಮೊತ್ತದ ಸಾಲವನ್ನು ತಿಳಿದ ನಂತರ ಎಲ್ಲಾ ಭದ್ರತೆಗಳನ್ನು ಬಿಡುಗಡೆ ಮಾಡುತ್ತದೆ. ಇಂತಹ ಹಕ್ಕನ್ನು ಚಲಾಯಿಸಲು, ಸಾಲಗಾರನಿಗೆ ಉಳಿದ ಹಕ್ಕುಗಳ ಬಗ್ಗೆ ಸಂಪೂರ್ಣ ವಿವರಗಳೊಂದಿಗೆ ನೋಟಿಸ್ ನೀಡಲಾಗುತ್ತದೆ ಮತ್ತು ಸಂಬಂಧಿತ ಕ್ಲೈಮ್ ಇತ್ಯರ್ಥವಾಗುವವರೆಗೆ / ಪಾವತಿಸುವವರೆಗೆ ಕಂಪನಿ ಭದ್ರತೆಯನ್ನು ತನ್ನ ಬಳಿಯೇ ಉಳಿಸಿಕೊಳ್ಳಲು ಅರ್ಹವಾಗಿರುತ್ತದೆ.

4. ಸಾಮಾನ್ಯ:

    - ಸಾಲಗಾರನೊಂದಿಗಿನ ಎಲ್ಲಾ ಸಂವಹನಗಳೂ ಇಂಗ್ಲೀಷ್ ಭಾಷೆಯಲ್ಲಿ ಅಥವಾ ಸಾಲಗಾರನಿಗೆ ಅರ್ಥವಾಗುವ ಭಾಷೆಯಲ್ಲಿರಬೇಕು.

    - ಸಾಲ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳಲ್ಲಿ ನೀಡಲಾಗಿರುವ ಉದ್ದೇಶಗಳನ್ನು ಹೊರತುಪಡಿಸಿ ಕಂಪನಿಯು ಸಾಲಗಾರನ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ (ಹೊಸ ಮಾಹಿತಿಯು ಸಾಲಗಾರ ಮೊದಲೇ ಬಹಿರಂಗಪಡಿಸದ ಹೊರತು ಕಂಪನಿಯ ಗಮನಕ್ಕೆ ಬರದಿದ್ದರೆ).

    - ಸಾಲದ ಖಾತೆಯ ವರ್ಗಾವಣೆಗೆ ಸಾಲಗಾರರಿಂದ ವಿನಂತಿಯನ್ನು ಸ್ವೀಕರಿಸಿದ್ದಲ್ಲಿ, ಒಪ್ಪಿಗೆ ಇದ್ದರೆ ಅಥವಾ ಇಲ್ಲದಿದ್ದರೆ - ಕಂಪನಿಯ ಆಕ್ಷೇಪಣೆ, ಯಾವುದಾದರೂ ಇದ್ದರೆ - ಮನವಿ ಸ್ವೀಕರಿಸಿದ ದಿನಾಂಕದಿಂದ 21 ದಿನಗಳೊಳಗೆ ಸಾಲಗಾರನಿಗೆ ತಿಳಿಸಲಾಗುವುದು. ಇಂತಹ ವರ್ಗಾವಣೆ ಕಾನೂನಿನ ಅನುಸರಣೆಯಲ್ಲಿ ಪಾರದರ್ಶಕ ಒಪ್ಪಂದದ ನಿಯಮಗಳ ಪ್ರಕಾರ ಇರಬೇಕು.

    - ಸಾಲ ಮಂಜೂರಾತಿಗೆ ಸಂಬಂಧಿಸಿದಂತೆ, ಕಂಪನಿ ಯಾವುದೇ ಕಿರುಕುಳ ನೀಡುವಂತಿಲ್ಲ- ಎಂದರೆ ಸಾಲಗಾರರಿಗೆ ಸೂಕ್ತವಲ್ಲದ ಸಮಯದಲ್ಲಿ ನಿರಂತರವಾಗಿ ಕರೆಮಾಡಿ ತೊಂದರೆ ನೀಡುವುದು, ಸಾಲ ವಸೂಲಾತಿಗೆ ದೈಹಿಕ ಬಲ ಬಳಸುವುದನ್ನು ಮಾಡುವಂತಿಲ್ಲ.

- ಸಿಬ್ಬಂದಿಗಳಿಗೆ ಗ್ರಾಹಕರನ್ನು ಸೂಕ್ತ ವಿಧಾನದಲ್ಲಿ ನಿರ್ವಹಿಸುವ ಬಗ್ಗೆ ಸಾಕಷ್ಟು ತರಬೇತಿ ನೀಡುವುದನ್ನು ಕಂಪನಿ ಖಚಿತಪಡಿಸಿಕೊಳ್ಳಬೇಕು.

- ಕಂಪನಿ ಫಂಡ್ ವೆಚ್ಚ, ಮಾರ್ಜಿನ್ ಮತ್ತು ರಿಸ್ಕ್ ಪ್ರೀಮಿಯಂ ಇತ್ಯಾದಿ ಸೂಕ್ತ ಅಂಶಗಳನ್ನು ಪರಿಗಣಿಸಿ ಬಡ್ಡಿದರದ ಮಾದರಿ ಅಳವಡಿಸಬೇಕು ಹಾಗೂ ಸಾಲ ಹಾಗೂ ಮುಂಗಡಗಳಿಗೆ ಬಡ್ಡಿದರ ನಿರ್ಧರಿಸಬೇಕು.

- ಮಂಜೂರಾತಿ ಪತ್ರ ವಾರ್ಷಿಕ ಬಡ್ಡಿದರ ಮತ್ತು ಅನ್ವಯವಾಗುವ ವಿಧಾನವನ್ನು ಸೂಚಿಸಬೇಕು. ಇದರಿಂದ ಸಾಲಗಾರ ಖಾತೆಗೆ ವಿಧಿಸಲಾಗುವ ನಿಖರವಾದ ದರದ ಬಗ್ಗೆ ತಿಳಿದಿರಲು ನೆರವಾಗುತ್ತದೆ.

**5. ದೂರು ನಿರ್ವಹಣಾ ಅಧಿಕಾರಿ**

- ಇದಕ್ಕೆ ಸಂಬಂಧಿಸಿದಂತೆ ಉಂಟಾಗುವ ವಿವಾದಗಳನ್ನು ಪರಿಹರಿಸಲು ಕಂಪನಿಯು ಸಂಸ್ಥೆಯೊಳಗೆ ಸೂಕ್ತ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ರೂಪಿಸಿದೆ. ಈ ಕಾರ್ಯವಿಧಾನ ಕಾರ್ಯಕಾರಿಗಳ ನಿರ್ಧಾರಗಳಿಂದ ಉಂಟಾಗುವ ಎಲ್ಲಾ ವಿವಾದಗಳನ್ನು ಕನಿಷ್ಠ ಮುಂದಿನ ಉನ್ನತ ಮಟ್ಟದಲ್ಲಿ ಕೇಳಿ ವಿಲೇವಾರಿ ಮಾಡುತ್ತದೆ ಎಂದು ಖಚಿತಪಡಿಸುತ್ತದೆ.

- ಕಂಪನಿ ತನ್ನ ಗ್ರಾಹಕರ ಪ್ರಯೋಜನಕ್ಕಾಗಿ, ತನ್ನ ಶಾಖೆಗಳು/ಉದ್ದಿಮೆ ವ್ಯವಹಾರ ನಡೆಯುವ ಸ್ಥಳಗಳಲ್ಲಿ, ಕೆಳಗಿನ ಮಾಹಿತಿಯನ್ನು ಪ್ರಮುಖವಾಗಿ ಪ್ರದರ್ಶಿಸಬೇಕು.

- ಕಂಪನಿಯ ವಿರುದ್ಧ ದೂರು ಪರಿಹಾರಕ್ಕಾಗಿ ಸಾರ್ವಜನಿಕರು ಸಂಪರ್ಕಿಸಬಹುದಾದ ದೂರು ನಿರ್ವಹಣಾ ಅಧಿಕಾರಿಯ ಹೆಸರು ಮತ್ತು ಸಂಪರ್ಕ ವಿವರಗಳು (ದೂರವಾಣಿ/ಮೊಬೈಲ್ ಸಂಖ್ಯೆ, ಜೊತೆಗೆ ಇಮೇಲ್ ವಿಳಾಸ)

- ದೂರು/ವಿವಾದ ಒಂದು ತಿಂಗಳ ಅವಧಿಯೊಳಗೆ ಪರಿಹಾರವಾಗದಿದ್ದರೆ, ಗ್ರಾಹಕ ಕೆಳಗಿನ ವಿಳಾಸಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ನ ಡಿ ಎನ್ ಬಿ ಎಸ್ ನ ಪ್ರಾದೇಶಿಕ ಅಧಿಕಾರಿಗೆ ಮನವಿ ಮಾಡಬಹುದು:

ಉಸ್ತುವಾರಿ ಅಧಿಕಾರಿ
ಬ್ಯಾಂಕೇತರ ಮೇಲ್ವಿಚಾರಣಾ ವಿಭಾಗ, ಕೊಲ್ಕತ್ತಾ ಪ್ರಾದೇಶಿಕ ಕಚೇರಿ
15, ನೇತಾಜಿ ಸುಭಾಷ್ ರಸ್ತೆ, ಕೊಲ್ಕತ್ತಾ 700001.

**6. ವ್ಯಾಪಕ ಪ್ರಸಾರ ಮತ್ತು ಆಗಾಗ್ಗೆ ಅವಲೋಕಿಸುವುದು**

ಕಂಪನಿ ಮೇಲೆ ನೀಡಲಾದ ಎಫ್ ಪಿ ಸಿ ವಿವರಗಳನ್ನು ತನ್ನ ವೆಬ್ ಸೈಟ್ ನಲ್ಲಿ, ವಿವಿಧ ಸ್ಟೇಕ್ ಹೋಲ್ಡರ್ ಗಳ ಮಾಹಿತಿಗಾಗಿ ಹಾಕಬೇಕು. ಕಂಪನಿ ಎಫ್ ಪಿ ಸಿ ಅವಲೋಕಿಸಿ ಪರಿಷ್ಕರಿಸುವ ಮೂಲಕ, ಆಗಾಗ್ಗೆ ಪರಿಶೀಲಿಸುವ ಅಗತ್ಯವಿದೆ- ಇದಕ್ಕೆ ಸಂಬಂಧಿಸಿದಂತೆ ಇದು ಆರ್ ಬಿ ಐ ನೀಡುವ ಯಾವುದೇ ಸ್ವಯಂ ಅನುಭವ ಮತ್ತು ಹೊಸ ಮಾರ್ಗಸೂಚಿಗಳನ್ನು ಆಧರಿಸಿರುತ್ತದೆ.

**ವಿವರಣಾತ್ಮಕ ಟಿಪ್ಪಣಿ:**

ಸಗಟು ಸಾಲ ಉದ್ದಿಮೆಯಲ್ಲಿ, ಬಡ್ಡಿದರವನ್ನು ಪ್ರತೀ ಸಾಲಗಾರನ ಸಂಕೀರ್ಣ ಅಪಾಯ ಪ್ರೊಫೈಲ್ ಆಧರಿಸಿ ನಿರ್ಧರಿಸಲಾಗುತ್ತದೆ. ಕಂಪನಿ ಪ್ರಮುಖ ಸಾಲ ನೀಡಿಕೆಯ ದರ (ಅಥವಾ ಇತರ ಯಾವುದೇ ಅನ್ವಯವಾಗುವ ಗುರುತು, ಅಥವಾ ಸ್ಥಿರ ದರವಿದ್ದಲ್ಲಿ, ಅಂತಹ ಸ್ಥಿರ ದರ) ವನ್ನು ಬಹಿರಂಗಪಡಿಸಬೇಕು. ಅನ್ವಯವಾಗುವ ಸ್ಪ್ರೆಡ್ ಮತ್ತು ಮರುಹೊಂದಿಸುವ ಆವರ್ತನವನ್ನು ಮಂಜೂರಾತಿ ಪತ್ರ ಮತ್ತು ಸೌಲಭ್ಯ ಒಪ್ಪಂದದ ಮೂಲಕ ಮಾಡಬೇಕು. ಇದಕ್ಕೆ

ಸಂಬಂಧಿಸಿದ ಯಾವುದೇ ಬದಲಾವಣೆಗಳಿದ್ದರೆ, ಈ ಅಂಶಗಳನ್ನು ಸೂಕ್ತವಾಗಿ ಬಹಿರಂಗಪಡಿಸಿ ಸಾಲಗಾರನಿಗೆ ತಿಳಿಸಬೇಕು.

ಈ ಸಾಲಗಾರರು ಸಾಮಾನ್ಯವಾಗಿ ಮಧ್ಯಮ-ಗಾತ್ರ/ದೊಡ್ಡ ಕಾರ್ಪೊರೇಟ್ ಸಮುಹವಾಗಿದ್ದು ಇದರ ಬಗ್ಗೆ ಸೂಕ್ತ ಮಾಹಿತಿ ಇರುತ್ತದೆ, ಆದ್ದರಿಂದ ಅವರ ಅಪಾಯ ಪ್ರೊಫೈಲ್ ನ ಯಾವುದೇ ಮಾರ್ಪಾಡಿದ್ದರೆ, ಅವರು ಉತ್ತಮ ರೀತಿಯಲ್ಲಿ ಹೊಂದಾಣಿಕೆ ಮಾಡುವ ಸ್ಥಿತಿಯಲ್ಲಿರುತ್ತಾರೆ. ಉದ್ದೇಶಿತ ಸಾಲದಲ್ಲಿನ ಬಡ್ಡಿದರವನ್ನು ಮಂಜೂರಾತಿ ಪತ್ರ ಮತ್ತು ಸೌಲಭ್ಯ ಒಪ್ಪಂದದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು.

**7. ವಾಹನಗಳ ಮರುವಸೂಲಾತಿ:**

ಕಂಪನಿ ಸಾಲಗಾರನೊಂದಿಗಿನ ಒಪ್ಪಂದ/ಸಾಲ ಒಪ್ಪಂದದಲ್ಲಿ ಮರು-ವಸೂಲಾತಿ ಉಪವರ್ಗವನ್ನು ರೂಪಿಸುವ ಮೂಲಕ ಕಾನೂನಿನ ಮೂಲಕ ಜಾರಿಗೊಳಿಸಬಹುದಾಗಿದೆ. ಪಾರದರ್ಶಕತೆಯನ್ನು ಖಚಿತಪಡಿಸಲು, ಒಪ್ಪಂದ/ಸಾಲ ಒಪ್ಪಂದದ ನಿಯಮ ಮತ್ತು ಷರತ್ತುಗಳು ಈ ಕೆಳಗಿನವುಗಳಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಹೊಂದಿರಬೇಕು:

a) ವಶಕ್ಕೆ ಪಡೆಯುವ ಮೊದಲು ಸೂಚನಾ ಅವಧಿ

b) ಸೂಚನಾ ಅವಧಿಗೆ ವಿನಾಯಿತಿ ನೀಡಬಹುದಾದ ಸನ್ನಿವೇಶಗಳು

c) ಭದ್ರತೆಯನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆಗಳು

d) ಆಸ್ತಿ ಮಾರಾಟ/ಹರಾಜಿಗೆ ಮೊದಲು ಸಾಲ ಮರುಪಾವತಿಸಲು ಸಾಲಗಾರನಿಗೆ ಅಂತಿಮ ಅವಕಾಶ ನೀಡುವ ಸೌಲಭ್ಯ

e) ಸಾಲಗಾರನಿಗೆ ಮರುವಶ ನೀಡಲು ಪ್ರಕ್ರಿಯೆಗಳು ಮತ್ತು

f) ಆಸ್ತಿ ಮಾರಾಟ/ಹರಾಜಿನ ಪ್ರಕ್ರಿಯೆಗಳು

ಈ ನಿಯಮ ಮತ್ತು ಷರತ್ತುಗಳ ಪ್ರತಿಯನ್ನು ಸುತ್ತೋಲೆಯ ರೂಪದಲ್ಲಿ ಸಾಲಗಾರರಿಗೆ ಲಭ್ಯವಾಗುವಂತೆ ಮಾಡಬೇಕು. ಇದಕ್ಕೆ ಅನುಗುಣವಾಗಿ ಕಂಪನಿ ಎಲ್ಲಾ ಸಾಲಗಾರರಿಗೆ ಸಾಲ ಮಂಜೂರಾತಿ/ವಿತರಣೆಯ ಸಮಯದಲ್ಲಿ ಸಾಲ ಒಪ್ಪಂದದಲ್ಲಿ ಉಲ್ಲೇಖಿಸಲಾದ ಎಲ್ಲಾ ಲಗತ್ತುಗಳ ಒಂದು ಪ್ರತಿಯೊಂದಿಗೆ ಸಾಲ ಒಪ್ಪಂದದ ಪ್ರತಿ ನೀಡಬೇಕು. ಇದು ಇಂತಹ ಒಪ್ಪಂದ/ಸಾಲ ಒಪ್ಪಂದದ ಪ್ರಮುಖ ಭಾಗವಾಗಿರುತ್ತದೆ.